ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 12-01-2026 ರಂದು ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ ಎಸ್ ಎನ್ ವಕೀಲರ ಪರ ಎಂ ಡಿ ಎನ್ ವಕೀಲರಿಂದಃ**

1. ಆರೋಪಿತರಿಗೆ ರೂ4,50,000/- ನಗದು ಮತ್ತು 11 ತೊಲೆ ಬಂಗಾರ, 1 ಕೆ ಜಿ ಬೆಳ್ಳಿಯನ್ನು ವರದಕ್ಷಿಣೆಯಾಗಿ ನೀಡಿದ ಬಗ್ಗೆ ಲಿಖಿತ ದಾಖಲೆಗಳು ಇರುವುದಿಲ್ಲ.

2. ದಿಃ 20-09-2013 ರಂದು 1ನೇ ಆರೋಪಿ ನನ್ನ ಮಗಳಾದ ಚಾಸಾ-1ರವರು ಖಾತೆಗೆ ರೂ.1,65,040/- ವನ್ನು ವೈದ್ಯಕೀಯ ವೆಚ್ಚವಾಗಿ ಜಮಾ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

3. ಆರೋಪಿತರು ವರದಕ್ಷಿಣೆ ಕಿರುಕುಳ ನೀಡಿದ ಬಗ್ಗೆ ಪೋಲೀಸ ಠಾಣೆಯಲ್ಲಿ ನಾನು ದೂರು ಸಲ್ಲಿಸಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

4. ದಿಃ 30-11-2017 ರಂದು ಕಾರ ನಂ ಕೆ ಎ 4 ಎಂ ಎಚ್ 8303 ಗೆ ಸಂಬಂಧಿದಂತೆ 1 ನೇ ಆರೋಪಿ ತನ್ನ ಕೆನರಾ ಬ್ಯಾಂಕ್ ಖಾತೆಯ ಮೂಲಕ ನನ್ನ ಖಾತೆಗೆ ರೂ.2,75,000/- ಜಮಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ದಿಃ 08-06-2018 ರಂದು ರೂ.1,00,000/- ಹಣವನ್ನು ಮಹಮ್ಮದ ರಶಿದ್ ರವರಿಗೆ ನಾನು ಸೈಟ್ ಖರೀದಿ ಮಾಡಿದ ಬಗ್ಗೆ ಜಮಾ ಮಾಡಿರುತ್ತಾರೆ ಎಂದರೆ ಸರಿಯಲ್ಲ.

6.ಸಿದ್ದಿ ವಿನಾಯಕ ಸೇವಾ ಸಹಕಾರಿ ಸಂಘದಲ್ಲಿ ಖೇರಿದಿ ಮಾಡಿದ ರೂ.2 ಲಕ್ಷ ಹಣ ಬಾಂಡನ್ನು 1 ನೇ ಆರೋಪಿ ನನ್ನ ಮಗಳಾದ ಚಾಸಾ-1ರವರ ಹೆಸರಿಗೆ ಬದ್ರತೆಗಾಗಿ ನೀಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

7. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಮತ್ತು ನನ್ನ ಖಾತೆಗೆ ಸಂಬಂದಿಸಿದಂತೆ ಡೆಬಿಟ್ ಕಾರ್ಡನ್ನು ಹೆಚ್ಚಿನ ವರದಕ್ಷಿಣೆಗಾಗಿ ಕಿತ್ತು ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಡೆಬಿಟ್ ಕಾರ್ಡನಿಂದ ಸುಮಾರು 80,000/- ಹಣವನು ಪಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

8. ಆರೋಪಿತರು ಬ್ಯಾಂಕ ನಿಂದ ಮತ್ತು ಸೊಸೈಟಿಯಿಂದ ಹಣವನ್ನು ಬಿಡಿಸಿಕೊಂಡು ಬರುವಂತೆ ನನಗೆ ಬಲವಂತ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. 1ನೇ ಆರೋಪಿ 2 ರಿಂದ 4 ನೇ ಆರೋಪಿತರ ಪ್ರೇರೆಪಣೆಯಿಂದ ಚಾಸಾ-1ರವರ ಕಾಲಿಗೆ ಬಡಿಗೆ ಹೊಡೆದಿದ್ದರಿಂದ ಚಾಸಾ-1ರವರ ಕಾಲು ಮುರಿದಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

9. ಆರೋಪಿತರು ಯಾವುದೇ ಗಲಾಟೆ ಮಾಡಿ ನನ್ನ ಮಗಳಾದ ಚಾಸಾ-1ರವರ ಕಾಲು ಮುರಿದಿರುವುದಿಲ್ಲ, ಚಾಸಾ-1ರವರ ಅನಾರೋಗ್ಯದಿಂದ ಕಾರಣದಿಂದಾಗಿ ಚಾಸಾ-1ರವರ ಕಾಲು ಮುರಿದಿರುತ್ತದೆ ಎಂದರೆ ಸರಿಯಲ್ಲ.

10. 1 ನೇ ಆರೋಪಿ ಚಾಸಾ-1 ರವರನ್ನು ಮುದುವೆ ಆದಾಗಿಲಿನಿಂದ ನನ್ನ ಮನೆಯಿಂದಲೆ ತನ್ನ ಕೆಲಸಕ್ಕೆ ಹೋಗುತ್ತಿದ್ದನು.

11. 2020 ರಲ್ಲಿ 1 ನೇ ಆರೋಪಿ ಚಾಸಾ-1 ರವರನ್ನು ನಮ್ಮ ಮನೆಯಲ್ಲಿ ಬಿಟ್ಟುಹೋಗಿದ್ದು, ಆ ಸಮಯದಲ್ಲಿ ಚಾಸಾ-ರ 1 ವರ ಚಿಕಿತ್ಸೆಗಾಗಿ ರೂ4 ಲಕ್ಷವನ್ನು ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

12. ಆರೊಪಿತರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದಬೈದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

13. ದಿಃ 08-11-2020 ರಂದು ಸಂಜೆ 5-00 ರಿಂದ 6-00 ಸಮಯದಲ್ಲಿ ಆರೋಪಿತರೆಲ್ಲರೂ ನನಗೆ ಮತ್ತು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಚಾಸಾ-1 ರವರು 1 ನೇ ಆರೋಪಿಗೆ ವಿವಾಹ ವಿಚ್ಛೆದನ ನೀಡದೇ ಇದ್ದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

14. ಆರೋಪಿತರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ವಿವಾಹ ವಿಚ್ಛೆದನ ನೀಡದೇ ಇದ್ದರೆ ಜೀವ ಸಹಿತ ಬಿಡುವುದಿಲ್ಲ ಎಂದು ಚಾಸಾ-1 ರವರಿಗೆ ಹೊಡೆಯಲು ಹೋದಾಗ ನಾರಾಯಣ ಲಕ್ಷಣ ನಾಯ್ಕು ರವರು ಗಲಾಟೆ ಬಿಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಯಾವುದೇ ಧಮಕಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

15. ದಿಃ 09-11-2020 ರಂದು ನಾವು ಠಾಣೆಯಲ್ಲಿ ನೀಡಿದ ದೂರನ್ನು ಹಾಜರುಪಡಿಸಿರುತ್ತೇನೆ. ಸದರಿ ದೂರನ್ನು ಪೊಲೀಸರು ತೀರಸ್ಕಿಸಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

16. ನಿ.ಪಿ-9 ರಿಂದ 16 ಬಾವಚಿತ್ರ ದಲ್ಲಿ ಕಾಣಿಸುವ ಬಂಗಾರದ ಆಭರಣಗಳನ್ನು 1 ನೇ ಆರೋಪಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

17. ದಿಃ 08-11-2020 ರಂದು ಆರೋಪಿತರು ಯಾವ ಕಾರಿನಲ್ಲಿ ಬಂದಿದ್ದರು ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

18. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ,ಆರೋಪಿತರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆ ಬಡೆ ಮಾಡಿಲ್ಲ, ವರದಕ್ಷಿಣೆ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ.

19. ನಿ.ಪಿ-19 ರಿಂದ 21 ರವರೆಗಿನ ಬಿಲ್ ಗಳನ್ನು ಈ ಪ್ರಕರಣಕ್ಕೊಸ್ಕರ ನಾವು ಸೃಷಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ-19 ರಿಂದ 21 ರವರೆಗಿನ ಬಿಲ್ ಗಳಿಗೆ ಸಂಬಂದಿಸಿದಂತೆ ಯಾವುದೇ ಅಧಿಕೃತ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ08-11-2020 ರಂದು ಆರೋಪಿತರು ನಮ್ಮ ಮನೆಗೆ ಬಂದಿಲ್ಲ ಮತ್ತು ಧಮಕಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ

ನಾನು ಈ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ

**ಮರುವಿಚಾರಣೆಃ** ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**